Sir, seeing the requirement, the Deputy Commissioner, Bijapur acquired the same under the Defence of India Rules and there after it remained with the Handloom Development Corporation up to the year 1977. The moment the buliding came back to the Co-operative Apex Society, they got the techinical Report that some alteration was required for erecting these machineries. That is the reason. They have now taken up repairs and possibly by the end of March all these machineries will be commissioned.

ಶ್ರೀ ವಿ. ವಿ. ಪತ್ತಾರ್.—೧೯೭೭ರಲ್ಲಿ ಅಲ್ಲಿ ಬಿಲ್ಡಿಂಗ್ ಕಟ್ಟಿದ್ದರೂ ಸಹಿತ ಅದು ನಮಗೆ ತಿರುಗಿ ಬಂತು. ಅದಾದ ೫ ವರ್ಷದ ತನಕ ತಾವು ಅಲ್ಲಿ ಪ್ಲಾಂಟ್ಸ್ ಇನ್‌ಸ್ಟಾಲ್ ಮಾಡಿ ಪ್ರೊಡಕ್ಷನ್ ಮಾಡಲಿಲ್ಲ. ಇದಕ್ಕೆ ತಾವು ಏನು ಹೇಳುತ್ತೀರಿ ಎಂದರೆ, ಟೆಕ್ನಿಕಲ್ ರಿಪೋರ್ಟ್ ಪ್ರಕಾರ ಅಲ್ಲಿ ಆಲ್ಟರೇಷನ್ಸ್ ಮಾಡುವುದು ಇತ್ತು. ಅದು ಆಯಿತು ಎಂದು ಹೇಳುತ್ತೀರಿ, ತಮಗೆ ಆ ಟೆಕ್ನಿಕಲ್ ರಿಪೋರ್ಟ್ ಎಂದು ಬಂತು ? ಈ ಆಲ್ಟರೇಷನ್ ಮಾಡುವುದು ಎಂದು ಮುಗಿಯಿತು ? ಇದನ್ನು ಹೇಳಿ.

SRI MANIK RAO PATIL.— Sir, you are well aware how things move in this country and how procedural difficulties come in the way of getting done the alteration of this building. The Society had to obtain permission from the Registrar of Co-operative Societies. There after they will have to seek permission from the local bodies and all this process invariably bound to involve certain amount of time. I don't think there is any wanten delay on the part of the Society or on the part of the Government in commissioning these machineries,

National Rural Water Supply Scheme in Belgaum District

415. SRI R. C. BALEKUNDARGI (Bailhongal) Will the Minister for Rural Development and Panchayat Raj be pleased to state.—

(*a*) whether the villages of Mallapura in Gokak taluk and Nesargi in Bailhongal taluk have been included in the Water Supply Scheme works of Belgaum District under N.R.W. Scheme during 1980-81, on priority basis as indicated by the District Development Council ;

(*b*) whether sanction has been accorded to them if the said villages have been included in the priority list ;

(*c*) the estimated expenditure of Nesargi village Water Supply Scheme ;

(*d*) whether the Government would sanction the said Scheme during the year 1981-82 ?

SRI B. RAMAIAH (Minister for Rural Development and Panchayat Raj).—

(*a*) The two villages *viz.* Nesargi and Mallapura have been included in the list indicated by the District Development Council.

(*b*) Administrative and technical sanction has been accorded to the Mallapura Water Supply Scheme and the works are under progress. Government has accorded sanction for the Nesargi Scheme during 1981-82 and its estimates are being examined by the Executive Engineer (P.H.E.), Belgaum.

(*c*) Rs. 5.20 lakhs.

(*d*) Approval of Government has since been accorded.

ಶ್ರೀ ಆರ್. ಸಿ. ಬಾಳೇಕುಂದರಗಿ.—ಮಾನ್ಯ ಅಧ್ಯಕ್ಷರೇ, ೧೯೮೦-೮೧ನೇ ಸಾಲಿನಲ್ಲಿ ಇದರಲ್ಲಿ ಯಾವ್ಯಾವ ಹಳ್ಳಿಗಳು ಇವೆ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬಹುದೇ?

ಶ್ರೀ ಬಿ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ಈಗಾಗಲೇ ಅಚ್ಚಾದ ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ. ೧೯೮೦-೮೧ರಲ್ಲಿ ಕರ್ನಾಟಕದ ಬೆಳಗಾಂ ಜಿಲ್ಲೆಯಲ್ಲಿ ಮಲ್ಲಾಪುರ ಮತ್ತು ನೇಸರ್ಗಿ ಈ ಎರಡು ಗ್ರಾಮಗಳನ್ನೊಳಗೊಂಡಂತೆ ನಾವು ಪಟ್ಟಿಯನ್ನು ತಯಾರು ಮಾಡಿದ್ದೇವೆ.

ಶ್ರೀ ಆರ್. ಸಿ. ಬಾಳೇಕುಂದರಗಿ.—ಸ್ವಾಮಿ, ನಾನು ಈ ಪ್ರಶ್ನೆಯನ್ನು ಏತಕ್ಕೆ ಹಾಕಿದ್ದೇನೆ ಎಂದರೆ, ೧೯೮೦-೮೧ರಲ್ಲಿ ನೇಸರ್ಗಿ ಗ್ರಾಮವನ್ನು ನಾವು ಡಿ. ಸಿ. ಸಿ. ಮೀಟಿಂಗ್‌ನಲ್ಲಿ ಸೂಚನೆ ಮಾಡಿದ್ದೇವೆ. ಈ ಮಲ್ಲಾಪುರ ಗ್ರಾಮ ಡಿ.ಸಿ.ಸಿ. ಲಿಸ್ಟ್‌ನಲ್ಲಿ ಇರಲಿಲ್ಲ. ಈ ರೀತಿ ತಾರತಮ್ಯ ಆದ್ದರಿಂದ ನಾನು ಪ್ರಶ್ನೆ ಹಾಕಿದ್ದೇನೆ ಇದಕ್ಕೆ ಮಾನ್ಯ ಮಂತ್ರಿಯವರು ಏನು ಉತ್ತರ ಕೊಡುತ್ತಾರೆ?

ಶ್ರೀ ಬಿ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮಾಂತರ ಪ್ರದೇಶದ ಕುಡಿಯಂವ ನೀರಿನ ವ್ಯವಸ್ಥೆ ಹಾಗೂ ಕೇಂದ್ರ ಸರ್ಕಾರದ ಎನ್. ಆರ್. ಡಬ್ಲ್ಯೂ. ಎಸ್. ಸ್ಕೀಮ್‌ಗಳನ್ನು ನಾವು ಮಂಜೂರು ಮಾಡತಕ್ಕಂಥ ಸಂದರ್ಭದಲ್ಲಿ ಈ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಯು ನಮ್ಮ ರಾಜ್ಯದಲ್ಲಿ ಬರತಕ್ಕಾಂಥಾದ್ದು ಆದುದರಿಂದ ಈ ಬಗ್ಗೆ ನಾವು ಎರಡು ನಿಯಮಗಳನ್ನು ಇಟ್ಟುಕೊಂಡಿದ್ದೇವೆ. ಮೊದಲನೆಯ ನಿಯಮ ಜಿಲ್ಲಾಭಿವೃದ್ಧಿ ಸಮಿತಿಯವರು ರೆಕ್‌ಮಂಡ್ ಮಾಡಿ ಕೊಟ್ಟಿರತಕ್ಕಂಥ ಪರಿಷ್ಕರಣ ಪಟ್ಟಿಯ ಪ್ರಕಾರ ಕೊಡುವುದು ಮತ್ತು ಈಗಾಗಲೇ ಹಿಂದೆ ೧೦ ಪರ್ಸೆಂಟ್ ಹಣವನ್ನು ತುಂಬಿರತಕ್ಕಂಥ ಜನರಿಗೆ ಪ್ರಯಾರಿಟಿ ಕೊಡತಕ್ಕಂಥಾದ್ದು ಈ ಎರಡು ನಿಯಮಗಳು ಇವೆ. ಆದರಲ್ಲಿ ಬಹುಶಃ ಅವರು ಹೇಳತಕ್ಕಂಥಾದ್ದು ನನಗೆ ಅರ್ಥವಾಗುತ್ತಿದೆ, ಗೋಕಾಕ್ ತಾಲ್ಲೂಕಿನ ಮಲ್ಲಾಪುರ ಮತ್ತು ನೇಸರ್ಗಿ ಈ ಎರಡೂ ಗ್ರಾಮಗಳ ಬಗ್ಗೆ ವ್ಯತ್ಯಾಸ ಮಾಡುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಇದರಲ್ಲಿ ೧೦ ಪರ್ಸೆಂಟ್ ಹಣವನ್ನು ಅವರು ಮುಂಚೆ ತುಂಬಿರಬಹುದು, ಬಹುಶಃ ಅವರಿಗೆ ಮುಂಚೆ ಹೋಗಿರಬಹುದು. ಬಹುಶಃ ಅವರದು ಪ್ರಯಾರಿಟಿ ಲಿಸ್ಟ್‌ನಲ್ಲಿ ಬರದೇ ಇರುವುದರಿಂದ ೧೯೮೧-೮೨ನೇ ಸಾಲಿನಲ್ಲಿ ನಾನು ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗಾಗಲೇ ಎಸ್ಟಿಮೇಟ್ ತಯಾರಾಗಿದೆ. ಅವರಿಬ್ಬರಿಗೂ ಸಿಕ್ಕಿದೆ.

ಶ್ರೀ ಆರ್. ಸಿ. ಬಾಳೆಕುಂದರಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಈ ಒಂದು ಯೋಜನೆಯನ್ನು ಮಂಜೂರು ಮಾಡಿದ್ದಾರೆ, ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಆ ರೀತಿ ಮಾಡುವುದು ಎಂದರೆ ಅದು ತಾರತಮ್ಯ ಮಾಡಿದಂತಾಗುತ್ತದೆ. ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಉಪಯೋಗಿಸಿದಂತ ಜನರ ಮತ್ತು ಮಿನಿಸ್ಟರ್‌ಗಳ ಎಕ್ಸ್‌ಮಿನಿಸ್ಟರ್‌ಗಳ ಕೆಲಸ ಆಗುತ್ತಾದೆ. ನಮ್ಮ ಕೆಲಸಗಳು ಆಗುತ್ತಾ ಇಲ್ಲ. ಈ ಎಂ.ಎಲ್.ಎ.ಗಳು ಮನೆಗೆ ಹೋಗುವುದು ಯೋಗ್ಯ ಎಂದು ನನಗನ್ನಿಸುತ್ತಿದೆ. ಅದಕ್ಕಾಗಿ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಈ ರೀತಿ ತಾರತಮ್ಯ ಮಾಡುವುದು ಸರಿಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರು ಆ ಒಂದು ಅಭಿಪ್ರಾಯವನ್ನು ಇಟ್ಟುಕೊಳ್ಳಬಾರದು. ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ, ೧೦ ಪರ್ಸೆಂಟ್ ಹಣವನ್ನು ಸಾಲ ಮಾಡಿ ಮುಂಚೆ ತುಂಬಿರತಕ್ಕಂಥವರಿಗೆ ನಾವು ಕೊಡಬೇಕಾದ್ದು ನಮ್ಮ ಧರ್ಮ. ಅದರಂತೆ ನಾವು ಅವರಿಗೆ ಕೊಟ್ಟಿದ್ದೇವೆ ಅಷ್ಟೆ.